ರೂಪಾಯಿಗಳನ್ನು ಪರಿಹಾರ ಕೊಟ್ಟಿರುವುದರ ಬಗ್ಗೆ ತಾವು ಏನು ಹೇಳಿದ್ದೀರಿ, ಈ ಸರ್ಕಾರ ಯಾವಾಗಲೂ ಜನರ ಪರವಾಗಿ ಬದ್ಧವಾಗಿರುತ್ತದೆ. ನಾನು ಮತ್ತೆ ವೈಡ್‌ಲೈಫ್ ಆಫೀಸರ್ ಬಳಿ ಕಳುಹಿಸಿಕೊಟ್ಟು ಮತ್ತು ಡಾಕ್ಟರ್ ಹತ್ತಿರ ಕೂಡ ಕಳುಹಿಸಿಕೊಟ್ಟು, ಇನ್ನೂ ಹತ್ತು ಸಾವಿರ ರೂಪಾಯಿ ಕೊಡುವಂಥ ವ್ಯವಸ್ಥೆ ಮಾಡಿಸಿಕೊಡುತ್ತೇನೆ.

ಬಿಜಾಪುರ ನಗರದಲ್ಲಿ ಫುಡ್ ಪಾರ್ಕ್ ಸ್ಥಾಪಿಸುವುದು

199 (1125) ಶ್ರೀ ಅಪ್ಪಾ ಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ): ಮಾನ್ಯ ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಒಟ್ಟು ಫುಡ್ ಪಾರ್ಕ್‌ಗಳ ಸಂಖ್ಯೆ ಎಷ್ಟು; ಅವು ಯಾವುವು;

ಆ) ಹೊಸದಾಗಿ ಫುಡ್ ಪಾರ್ಕ್‌ಗಳನ್ನು ಸ್ಥಾಪಿಸಲು ಉದ್ದೇಶಿಸಿರುವ ಸ್ಥಳಗಳು ಯಾವುವು;

ಇ) ಬಿಜಾಪುರ ನಗರದಲ್ಲಿ ಫುಡ್ ಪಾರ್ಕ್ ಸ್ಥಾಪಿಸುವ ಪ್ರಸ್ತಾಪನೆ ಸರ್ಕಾರದ ಮುಂದಿದೆಯೇ;

ಈ) ಬಿಜಾಪುರದಲ್ಲಿ ಯಾವಾಗ ಫುಡ್ ಪಾರ್ಕ್ ಸ್ಥಾಪಿಸಲಾಗುವುದು;

ಉ) ಬಿಜಾಪುರ ನಗರದಲ್ಲಿ ಫುಡ್ ಪಾರ್ಕ್ ಸ್ಥಾಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು) :

ಅ) ರಾಜ್ಯದಲ್ಲಿ ಐದು ಫುಡ್ ಪಾರ್ಕ್‌ಗಳನ್ನು ಕಾರ್ಯಗತಗೊಳಿಸಲಾಗಿದೆ, ಅವುಗಳು ಯಾವುವೆಂದರೆ, ಮಾಲೂರು, ಹಿರಿಯೂರು, ಬಾಗಲಕೋಟೆ, ಜೇವರ್ಗಿ ಮತ್ತು ಮದ್ದೂರು ಫುಡ್ ಪಾರ್ಕ್‌ಗಳು.

ಆ) ಹೊಸ ಫುಡ್ ಪಾರ್ಕ್‌ಗಳನ್ನು ಹಾಸನ, ಶಿವಮೊಗ್ಗ, ಬಿಜಾಪುರ, ಬೆರಗಳೂರು ಗ್ರಾಮಾಂತರ (ಕನಕಪುರ ಮತ್ತು ರಾಮನಗರ) ಬೀದರ್ (ಹುಮ್ನಾಬಾದ್) ಮತ್ತು ಕೊಡಗು ಜಿಲ್ಲೆಗಳಲ್ಲಿ ಸ್ಥಾಪಿಸಲು ಪರಿಶೀಲಿಸಲಾಗುವುದು.

ಇ) ಬಿಜಾಪುರ ನಗರದಲ್ಲಿ ಫುಡ್ ಪಾರ್ಕ್ ಸ್ಥಾಪಿಸಲು ಪ್ರಸ್ತಾವನೆ ಇರುವುದಿಲ್ಲ ಆದಾಗ್ಯೂ, ಬಿಜಾಪುರ ಜಿಲ್ಲೆಯಲ್ಲಿ ಫುಡ್ ಪಾರ್ಕ್ ಸ್ಥಾಪಿಸಲು ಪರಿಶೀಲಿಸಲಾಗುವುದು.

ಈ) ಪರಿಶೀಲನೆಯಲ್ಲಿದೆ.

ಉ) 1) ಪ್ರಭಾವಿತ ಬಿಡ್ಡುದಾರರಿಂದ ಆಸಕ್ತಿಯನ್ನು ವ್ಯಕ್ತಪಡಿಸಲು ಆಹ್ವಾನಿಸಲಾಗಿದೆ.

2) ಆಯ್ದ ಬಿಡ್ಡುದಾರರನ್ನು ಯೋಜನೆಯ ತಾಂತ್ರಿಕ-ಆರ್ಥಿಕ ಬಾದ್ಯತೆಯಲ್ಲಿ ಸಲ್ಲಿಸಲು ಕೋರಲಾಗಿದೆ.

ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ : ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿದ್ದಾರೆ. ಫುಡ್ ಪಾರ್ಕ್ ಬಿಜಾಪುರದಲ್ಲಿ ಆಗಬೇಕೆಂದು ಬಹಳ ದಿವಸಗಳಿಂದ ಇತ್ತು. ಬಾಗಲಕೋಟೆಗೆ ಹೋಗಿದೆ. ಬಿಜಾಪುರಕ್ಕೂ ಕೊಡಬೇಕೆಂದು ನಾನು ಕೇಳಿದ್ದೆ. ಇದರ ಜೊತೆಗೆ ಇನ್ನೊಂದು ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳುತ್ತೇನೆ. ಅದೇನೆಂದರೆ ವೈನ್ ಪಾರ್ಕ್ ಬಿಜಾಪುರದಲ್ಲಿ ಆಗಬೇಕೆಂದು ಬಹಳ ದಿವಸಗಳಿಂದ ಕೇಳುತ್ತಿದ್ದೇವೆ. ಇದಕ್ಕೆ ಬೇಕಾದಂಥ ವಾತಾವರಣ ಹಾಗೂ

ಹಣ್ಣುಗಳು ಸಿಗುತ್ತವೆ. ಈ ರೀತಿ ಇದ್ದರೂ ಕೂಡ ಇನ್ನು ವೈನ್ ಪಾರ್ಕ್ ಮಾಡಿಲ್ಲ. ಮಹಾರಾಷ್ಟ್ರದಲ್ಲಿ ಈಗಾಗಲೇ ಮಾಡಲಾಗಿದೆ. ಆದರೆ ನಮ್ಮ ರಾಜ್ಯದಲ್ಲಿ ವೈನ್ ಪಾಲಿಸಿಯೇ ಇನ್ನೂ ಆಗಿಲ್ಲ. ಆದರೆ ಮಹಾರಾಷ್ಟ್ರದಲ್ಲಿ ವೈನ್ ಪಾಲಿಸಿ ಆಗಿದ್ದು ಈಗಾಗಲೇ ಆಸ್ಟ್ರೇಲಿಯಾದಿಂದ ಹಾಗೂ ಬೇರೆ ದೇಶಗಳಿಂದ ಬಂದವರು ನೋಡಿಕೊಂಡು ಹೋಗಿ ಸಾಕಷ್ಟು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ರಾಜ್ಯದಲ್ಲೂ ಒಂದು ವೈನ್ ಪಾಲಿಸಿ ಮಾಡಿ ನಮ್ಮ ಬಿಜಾಪುರದಲ್ಲಿ ಒಂದು ಉತ್ತಮವಾದಂಥ ವೈನ್ ಪಾರ್ಕ್‌ನ್ನು ಮಾಡಿದರೆ ರೈತರಿಗೆ ಅನುಕೂಲವಾಗುತ್ತೆ ಮತ್ತು ಒಳ್ಳೆಯದಾಗುತ್ತದೆಯಾದ ಕಾರಣ ನಾನು ಮಾನ್ಯ ಸಚಿವರ ಗಮನಕ್ಕೆ ಈ ವಿಚಾರವನ್ನು ತರುತ್ತಿದ್ದೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ಫುಡ್ ಪಾರ್ಕ್ ಬಗ್ಗೆ 1997ರಲ್ಲಿ ಮಾನ್ಯ ಎಸ್. ಎಂ. ಕೃಷ್ಣರವರ ಸರ್ಕಾರ ಇದ್ದಾಗ ಕೂಡ ಪ್ರಸ್ತಾವನೆ ಬಂದಿತ್ತು. ಅತಿ ಹೆಚ್ಚು ಹಣ್ಣು ಹಂಪಲು ಬೆಳೆಯತಕ್ಕಂಥ ಜಿಲ್ಲೆ ಯಾವುದು ಎಂದು ಮಾನ್ಯ ಸಚಿವರಲ್ಲಿ ನಾನು ಕೇಳಬಯಸುತ್ತೇನೆ. ಏಕೆಂದರೆ ಆ ಜಿಲ್ಲೆಯಲ್ಲಿ ಇದನ್ನು ಸ್ಥಾಪಿಸಬೇಕೆಂದು ಪ್ರಸ್ತಾವನೆ ಇತ್ತು. ಆದರೆ ದುರ್ದೈವವಶಾತ್ ಎಲ್ಲಿಗೆ ಹೋಯಿತೆಂದರೆ, ಮಾಲೂರಿಗೆ ಹೋಯಿತು, ಹಿರಿಯೂರಿಗೆ ಹೋಯಿತು, ಮದ್ದೂರಿಗೆ ಹೋಯಿತು ಮತ್ತು ಜೇವರ್ಗಿಗೆ ಹೋಯಿತು. ಆದರೆ ಇಲ್ಲಿಯವರೆಗೆ ಹಾರ್ಟಿಕಲ್ಚರ್ ಡಿಸ್ಟ್ರಿಕ್ಟ್ ಎಂದು ಯಾವುದು ಅನ್ನಿಸಿಕೊಂಡಿದೆಯೋ ಅಲ್ಲಿಯೇ ಫುಡ್ ಪಾರ್ಕ್ ಇಲ್ಲ. ಇವೊತ್ತು ಪಟ್ಟಣಶೆಟ್ಟರು ಹೇಳಿದ ಹಾಗೆ ನಮ್ಮ ಜಿಲ್ಲೆಯ ಸಲುವಾಗಿ ವೈನ್ ಪಾಲಿಸಿಯನ್ನು ವಿಶೇಷವಾಗಿ ತರಬೇಕೆಂಬ ಪ್ರಸ್ತಾವನೆ ಕೂಡ ಸರ್ಕಾರದಲ್ಲಿತ್ತು. ನಾಲ್ಕು ವರ್ಷದ ಹಿಂದೆ ಇತ್ತು. ಮಹಾರಾಷ್ಟ್ರದಲ್ಲಿ ಆನ್ ಪಾರ್ ವಿತ್ ಮಹಾರಾಷ್ಟ್ರ ವೈನ್ ಪಾಲಿಸಿ ಏನು ಬಂದಿದೆ ಅದು ಸರ್ಕಾರದ ಮುಂದಿದೆ. ಅದೂ ಕೂಡ ಇಲ್ಲಿಯವರೆಗೆ ಕಾರ್ಯಗತವಾಗಿಲ್ಲ. ಇನ್ನು ಮಾನ್ಯ ಸಚಿವರು ಉತ್ತರದಲ್ಲಿ ಬಿಜಾಪುರದಲ್ಲಿ ಫುಡ್ ಪಾರ್ಕ್ ಸ್ಥಾಪಿಸುವ ಪ್ರಸ್ತಾವನೆ ಇರುವುದಿಲ್ಲವೆಂದು ಹೇಳಿದ್ದಾರೆ. ಹಾರ್ಟಿಕಲ್ಚರ್ ಯಾವ ಜಿಲ್ಲೆಯಲ್ಲಿ ಹೆಚ್ಚಿದೆಯೋ ಅಲ್ಲಿಯೇ ಫುಡ್ ಪಾರ್ಕ್ ಇಲ್ಲವೆಂದರೆ ಮತ್ತೆ ನೀವೆಲ್ಲಿ ಸ್ಥಾಪಿಸಬೇಕು ಎನ್ನುವ ವಿಚಾರ ಇಟ್ಟುಕೊಂಡಿದ್ದೀರಿ ಎಂಬ ಬಗ್ಗೆ ಸಭೆಗೆ ತಿಳಿಸಬೇಕೆಂದು ನಾನು ಕೇಳಬಯಸುತ್ತೇನೆ.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಮಧ್ಯಮ ಹಾಗೂ ಬೃಹತ್ ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, ಫುಡ್ ಪಾಲಿಸಿ ನಮ್ಮ ರಾಜ್ಯದಲ್ಲಿ ಈಗ ಇಲ್ಲ. ಇನ್ನು ವೈನ್ ಪಾಲಿಸಿ ಬಗ್ಗೆ ಅವರು ಕೇಳಿದ್ದಾರೆ. ಇದರ ಬಗ್ಗೆ ಈಗಾಗಲೇ ಮಾನ್ಯ ಉಪ ಮುಖ್ಯಮಂತ್ರಿಗಳ ಜೊತೆಯಲ್ಲಿ ವೈನ್ ತಯಾರಕರೆಲ್ಲರೂ ಮಾತನಾಡಿದ್ದಾರೆ. ಅದರ ಬಗ್ಗೆ ನಾವು ಪರಿಶೀಲಿಸಿ ಪಾಲಿಸಿಯನ್ನು ತಯಾರು ಮಾಡುವುದರ ಕಡೆ ಗಮನ ಹರಿಸುತ್ತೇವೆ. ಈಗೇನು ನಾವು ಇಂಡಸ್ಟ್ರಿಯಲ್ ಪಾಲಿಸಿಯನ್ನು ತರುತ್ತಿದ್ದೇವೋ ಅದರಲ್ಲಿ ಕೂಡ ಅದನ್ನು ಪರಿಶೀಲನೆ ಮಾಡಿ ಸೂಕ್ತವಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ತಾವೇನು ಈಗ ಹೇಳಿದಿರಿ, ಬಿಜಾಪುರ ಹಣ್ಣು ಹಂಪಲು ಮತ್ತು ಹಾರ್ಟಿಕಲ್ಚರ್ ಆ್ಯಕ್ಟಿವಿಟೀಸ್ ಇಲ್ಲಿ ಹೆಚ್ಚಾಗಿರುವುದರಿಂದ ಇಲ್ಲಿ ಫುಡ್ ಪಾರ್ಕ್ ಆಗಬೇಕೆಂದು ಹೇಳಿದ್ದೀರಿ. ಈಗಾಗಲೇ ಆಸಕ್ತಿ ಇರುವಂಥ ಕೆಲವರಿಗೆ ಇಲ್ಲಿ ಫುಡ್ ಪಾರ್ಕ್ ಸ್ಥಾಪನೆ ಮಾಡುವ ಸಲುವಾಗಿ ನಾವು ಬಿಡ್ಡರ್ಸ್‌ನ್ನು ಕರೆದಿದ್ದೇವೆ. ಬಿಜಾಪುರ ಜಿಲ್ಲೆಯದಕ್ಕೂ ಸಹ ಮೂರು ಜನ ಬಿಡ್ಡರ್ಸ್ ಈಗಾಗಲೇ ಭಾಗವಹಿಸಿದ್ದಾರೆ.

ಜೆ.ಎಂ.ಸಿ. ಪ್ರಾಡೆಕ್ಟ್ಸ್ ಅಹಮದಾಬಾದ್‌ನವರು, ನ್ಯಾಗೊಲೈಸ್ ಇಂಡಿಯಾ ಲಿಮಿಟೆಡ್, ನ್ಯೂಡೆಲ್ಲಿಯವರು, ಗ್ರೀನ್‌ಡಾನ್ ಕನ್ಸಲ್‌ಟೆನ್ಸಿ, ಬೆಂಗಳೂರಿನವರು. ಈ ಮೂರು ಜನ ಕೂಡ ಆಸಕ್ತಿ ಇದೆ ಎಂದು ಹೇಳಿ ಅಲ್ಲಿ ಫುಡ್ ಪಾರ್ಕ್ ಸ್ಥಾಪನೆ ಮಾಡುವುದಕ್ಕೆ ಅವರು ಅರ್ಜಿಗಳನ್ನು ಕೊಟ್ಟಿದ್ದಾರೆ. ಪೂರ್ತಿ ವಿವರಗಳನ್ನು ಕೊಡಿ ತಮಗೆ ಅನುಮತಿ ಕೊಡುತ್ತೇವೆ ಎಂದು ಹೇಳಿದ್ದೇವೆ. ಈಗ ಕೇಂದ್ರ ಸರ್ಕಾರದಲ್ಲಿ ಸಣ್ಣ ಸಣ್ಣ ಫುಡ್ ಪಾರ್ಕ್‌ಗಳನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. 11ನೇ ಪ್ಲಾನ್‌ನಲ್ಲಿ ನಾವೂ ಇಂಪ್ಲಿಮೆಂಟೇನ್ ಮಾಡುವುಕ್ಕೆ ಪಾಲಿಸಿ ಚೇಂಜ್ ಮಾಡುತ್ತಿದ್ದೇವೆ. ಮೆಗಾ ಫುಡ್ ಪಾರ್ಕ್ ಅನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ ಎಂದು ಮೊನ್ನೆ ಮಾನ್ಯ ಸುಬೋಧ್ ಕಾಪ್ ಸಹಾಯ ಅವರನ್ನು ನಾನು ಭೇಟಿ ಮಾಡಿದ್ದೇನೆ. ಆ ಸಂದರ್ಭದಲ್ಲಿ ಹೊಸ ಪಾಲಿಸಿಯಲ್ಲಿ ನಾವು ದೊಡ್ಡ ದೊಡ್ಡದಾಗಿ ಆಹಾರ ಸಂಸ್ಕರಣಾ ಘಟಕಗಳಿಗೆ ನಾವು ಉತ್ತೇಜನ ಕೊಡುತ್ತೇವೆ, ಈಗ ಸಣ್ಣ ಸಣ್ಣ ಘಟಕಗಳನನು ನಿಲ್ಲಿಸಿದ್ದೇವೆ ಎಂದೂ ಕೂಡ ನಮ್ಮ ಹತ್ತಿರ ಹೇಳಿದರು.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಹೇಳುವುದು ಇಷ್ಟೆ, ಮೆಗಾ ಫುಡ್ ಪಾರ್ಕ್ ನೀವು ಸ್ಥಾಪನೆ ಮಾಡುವಂಥಾದ್ದನ್ನು ಕಳೆದುಕೊಳ್ಳುತ್ತೀರಿ ಎನ್ನುವಂತಹ ಆತಂಕವನ್ನು ಕೇಂದ್ರದ ಸಚಿವರು ವ್ಯಕ್ತಿಪಡಿಸಿ ಹೋಗಿದ್ದಾರೆ. ಆದರೆ ಎಲ್ಲಿ ನಿಜವಾಗಿ ಹಾರ್ಟಿಕಲ್ಚರ್ ಜೋನ್ ಇದೆ, ಅಲ್ಲಿ ನೀವು ಒಂದು ಫುಡ್ ಪಾರ್ಕ್ ಮಾಡದೆ ನೀವು ಏನಾದರೂ ಮದ್ದೂರಿನಲ್ಲಿ ಕಬ್ಬು ಬೆಳೆಯುವಂತಹ ಕಡೆ ಫುಡ್ ಪಾರ್ಕ್ ಮಾಡುತ್ತೀರಿ. ಜೇವರ್ಗಿಗೆ ಮಾಡಿದ್ದೀರಿ. ಮಾಲೂರಿಗೆ ಮಾಡಿದ್ದೀರಿ ಮತ್ತೆ ಮಾಡಿರುವುದು ನಾಲ್ಕು ವರ್ಷವಾಯಿತು. ಆದರೆ ಒಂದೂ ಇನ್ನೂ ಕಾರ್ಯಗತವಾಗಿಲ್ಲ. ನೀವು ಅದನ್ನು ಏನಾದರೂ ರಿವ್ಯೂ ಮಾಡಿದ್ದೀರೋ ಬಿಟ್ಟಿದ್ದೀರೋ ಗೊತ್ತಿಲ್ಲ. ಒಂದು ಫುಡ್ ಪಾರ್ಕ್ ಕೂಡ ಗೌವರ್ನ್‌ಮೆಂಟ್ ಆಫ್ ಇಂಡಿಯಾದವರು ಕೊಟ್ಟಿರುವಂತಹ ಅಸಿಸ್ಟೆನ್ಸ್ ಅನ್ನು ಪ್ರಾಪರ್‌ಆಗಿ ಯೂಸ್ ಮಾಡಿ ಅದರ ಪ್ರಾರಂಭ ಕೂಡ ಮಾಡಿಲ್ಲ. ಮತ್ತು ನಿಮ್ಮ ಧೋರಣೆ ಎಲ್ಲಿ ಬರಬೇಕು ಎನ್ನುವುದರ ಬಗ್ಗೆ ಸರ್ಕಾರಕ್ಕೆ ಕ್ಲಾರಿಟಿ ಇರಬೇಕು. ಎಲ್ಲಿ ಗ್ರಾನೈಟ್ ಇದೆ ಅಲ್ಲಿ ನೀವು ಗ್ರಾನೈಟ್ ಉದ್ಯಮ ಮಾಡಿದರೆ ಒಳ್ಳೆಯದು, ಅಲ್ಲಿ ಐರನ್ ಓರ್ ಮಾಡುವುದಕ್ಕಾಗುತ್ತದಾ? ಎಲ್ಲಿ ಹಣ್ಣುಹಂಪಲು ಇದೆ ಅಲ್ಲಿ ಫುಡ್ ಪಾರ್ಕ್ ಮಾಡುವುದು ಬಿಟ್ಟು, ಎಲ್ಲಿ ಕಬ್ಬು ಬೆಳೆಯುತ್ತಾರೆ, ಎಲ್ಲಿ ತೊಗರಿ ಬೆಳೆಯುತ್ತಾರೆ, ಅಲ್ಲಿ ಫುಡ್ ಪಾರ್ಕ್ ಮಾಡಿದರೆ ನಾವೇನು ಹೇಳಬೇಕು ನಿಮಗೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಉತ್ತರ ಕೊಡಬೇಕಾದರೆ ಬಿಜಾಪುರದಲ್ಲಿ ಫುಡ್ ಪಾರ್ಕ್ ಮಾಡುವ ಉದ್ದೇಶ ಸರ್ಕಾರಕ್ಕೆ ಇಲ್ಲವೆಂದು ಹೇಳಿದ್ದೀರಿ. ಟೆಂಡರ್ ಕರೆದಿದ್ದೆವು, ಅದರಲ್ಲಿ ಮೂರು ಜನ ಬೆಡ್ ಮಾಡಿದ್ದೆವು ಎಂದು ಅಸೆಂಬ್ಲಿಯಲ್ಲಿ ಹೇಳುತ್ತಿದ್ದೀರಿ. ತಾವು ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿಬಿಟ್ಟಿದ್ದು, ಬಿಜಾಪುರದಲ್ಲಿ ಫುಡ್ ಪಾರ್ಕ್ ಮಾಡುವ ಇಂಟೆನ್‌ಷನ್ ಸರ್ಕಾರಕ್ಕೆ ಇಲ್ಲ ಎಂದು. ಆಮೇಲೆ ಹೇಳುತ್ತೀರಿ ಟೆಂಡರ್ ಕರೆದಿದ್ದು, ಮೂರು ಜನ ಭಾಗವಹಿಸಿದ್ದಾರೆ ಬೆಡ್ಡಿಂಗ್ ಆಗಿದೆ ಎಂದು ಯಾವ ಉತ್ತರವನ್ನು ನಾವು ತೆಗೆದುಕೊಳ್ಳಬೇಕು? ತಾವು ಓದಿ. ಇನ್ನು ಎರಡನೆಯದಾಗಿ

ಶಿವಾನಂದ್ ಪಾಟೀಲ್ ಅವರ ಮಾತಿಗೆ ನೀವು ಹಾರ್ಟಿಕಲ್ಚರ್ ಜಿಲ್ಲೆಗಳನ್ನು ಸಾರಾಸಗಟಾಗಿ ಕೈಬಿಟ್ಟುಬಿಟ್ಟು ಬಿಜಾಪುರ, ತುಮಕೂರು ಹಾಗೂ ಕೋಲಾರ ಇಂತಹ ಹಾರ್ಟಿಕಲ್ಚರ್ ಕ್ರಾಪ್ ಜಿಲ್ಲೆಗಳನ್ನು ಬಿಟ್ಟು ಫುಡ್ ಮಾಡುತ್ತೇವೆಂದರೆ ಉದ್ದೇಶವೇನು ಎಂದು ಹೇಳಬೇಕಲ್ಲಾ. ಕೊಬ್ಬರಿ ಅಡಿಕೆ, ಹಣ್ಣುಹಂಪಲು ಬೆಳೆಯುವಂತಹ ತುಮಕೂರು ತೆಗೆದುಕೊಳ್ಳುವುದಿಲ್ಲ. ಮಾವು ಬೆಳೆಯುವ ಕೋಲಾರ ಬಿಡುತ್ತೀರಿ. ದಾಳಿಂಬೆ, ದ್ರಾಕ್ಷಿ ಬೆಳೆಯುವ ಬಿಜಾಪುರ ಬಿಡುತ್ತೀರಿ. ಹಾಗಾದರೆ ಫುಡ್ ಪಾರ್ಕ್ ಮಾಡುವ ಉದ್ದೇಶವೇನು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಹಾಗು ಮಾನ್ಯ ಶಿವಾನಂದ ಪಾಟೀಲ್‌ರವರು ಕೇಳಿದರು. ಬಿಜಾಪುರದಲ್ಲಿ ಫುಡ್ ಪಾರ್ಕ್ ಸ್ಥಾಪನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಇದಕ್ಕೆ ಇದು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೆವು.

ಶ್ರೀ ಶಿವಾನಂದ ಎಸ್. ಪಾಟೀಲ್ : ಇಲ್ಲ ಎಂದು ಹೇಳಿದ್ದೀರಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಇಲ್ಲ, ಇಲ್ಲ. ಪರಿಶೀಲನೆಯಲ್ಲಿದೆ ಎಂದು ಹೇಳಿ ಉತ್ತರ ಕೊಟ್ಟಿದ್ದೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ನೋಡಿ ಪ್ರಶ್ನೆ 'ಇ' ಗೆ ಕೊಟಿರುವಂತಹ ಉತ್ತರದಲ್ಲಿ ಬಿಜಾಪುರದಲ್ಲಿ ಫುಡ್ ಪಾರ್ಕ್ ಸ್ಥಾಪಿಸುವ ಪ್ರಸ್ತಾವನೆ ಇರುವುದಿಲ್ಲ, ಆದಾಗ್ಯೂ, ನೀವು ಒಂದು ತಾಸು ಕುಳಿತುಕೊಂಡು ಹೋಮ್‌ವರ್ಕ್ ಮಾಡಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಕೊನೆಯಲ್ಲಿ 'ಉ' ಪ್ರಶ್ನೆ ಉತ್ತರ ಕೊಟ್ಟಿದ್ದೇವೆ ನೋಡಿ, 'ಪ್ರಭಾವಿತ ಬಿಡ್ದುದಾರರಿಂದ ಆಸಕ್ತಿಯನ್ನು ವ್ಯಕ್ತಪಡಿಸಲು ಆಹ್ವಾನಿಸಲಾಗಿದೆ. ಆಯ್ದ ಬಿಡ್ದುದಾರರನ್ನು ಯೋಜನೆಯ ತಾಂತ್ರಿಕ – ಆರ್ಥಿಕ ಬಾಧ್ಯತೆಯಲ್ಲಿ ಸಲ್ಲಿಸಲು ಕೋರಲಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಒಂದು ಕಡೆ ಉತ್ತರ ಕೊಡುವಾಗ ಉದ್ದೇಶ ಇಲ್ಲವೆಂದು ಹೇಳುತ್ತೀರಿ. ಇನ್ನೊಂದು ಕಡೆ ನಾವು ಬಿಡ್ ಕರೆದಿದ್ದೇವೆ ಎಂದು ಹೇಳುತ್ತೀರಲ್ಲಾ. ಅದರಲ್ಲಿ ಯಾವುದನ್ನು ತೆಗೆದುಕೊಳ್ಳಬೇಕು ಎಂದು ಪ್ರಶ್ನೆ ಅಷ್ಟೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಇಲ್ಲದೇ ಇದ್ದರೂ ಕೂಡ ತಾವು ಉತ್ತರವನ್ನು ನೋಡಬೇಕು. ಬಿಜಾಪುರ ನಗರದಲ್ಲಿ ಫುಡ್ ಪಾರ್ಕ್ ಸ್ಥಾಪಿಸುವ ಪ್ರಸ್ತಾವನೆ ಇರುವುದಿಲ್ಲ ಆದಾಗ್ಯೂ ಬಿಜಾಪುರ ಜಿಲ್ಲೆಯಲ್ಲಿ ಫುಡ್ ಪಾರ್ಕ್ ಸ್ಥಾಪಿಸಲು ಪರಿಶೀಲಿಸಲಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಉದ್ದೇಶ ಇಲ್ಲದೇ ಇದ್ದರೆ ಟೆಂಡರ್ ಏಕೆ ಕರೆದಿರಿ ಎಂದು ಹೇಳಬೇಕಲ್ಲಾ ನೀವು. ಉದ್ದೇಶ ಇಲ್ಲದಿದ್ದ ಮೇಲೆ ಅವರು ಬಿಡ್ ಹೇಗೆ ಮಾಡಿದರು? ಪರಿಶೀಲನೆ ಮಾಡಿ ಮಾಡುತ್ತೇವೆ ಎಂದ ಮೇಲೆ ತಾನೇ ಟೆಂಡರ್ ಕರೆಯಬೇಕಾಗಿರುವುದು? ಮಾನ್ಯ ಕಂದಾಯ ಸಚಿವರೇ? ಪರಿಶೀಲನೆಯಲ್ಲಿರುವಾಗಲೇ ಟೆಂಡರ್ ಕರೆದುಬಿಡುತ್ತೀರಾ? ಹಾಗಾದರೆ ರಿಪ್ಲೈ ಏಕೆ ಕೊಡುತ್ತಾರೆ ಉದ್ದೇಶ ಇಲ್ಲ ಎಂದು.

ಅಧ್ಯಕ್ಷರು : ಆಯಿತು, ತಡೆಯಿರಿ ಈಗ ಪ್ರಶ್ನೋತ್ತರ ಬಹಳ ಹೊತ್ತಾಯಿತು ಮಾನ್ಯ ಸದಸ್ಯರು ಅದರ ಬಗ್ಗೆ ಕೇಳಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದರ ಆಗುಹೋಗುಗಳನ್ನು ಪರಿಶೀಲನೆ ಮಾಡದೆ ಪರಿಶೀಲನೆ ಮಾಡುತ್ತೇವೆ ಎಂದರೆ ಸರ್ಕಾರಿ ಭಾಷೆ ಅದು. ಪರಿಶೀಲನೆ ಮಾಡುತ್ತೇವೆ ಎಂದರೆ ಅದರ ಪೂರ್ವಾಪರಗಳನ್ನೆಲ್ಲಾ ಆಲೋಚನೆ ಮಾಡಿ ಅಂತಿಮವಾಗಿ ತೀರ್ಮಾನ ತೆಗೆದುಕೊಳ್ಳುತ್ತೇವೆ ಎನ್ನುವಂಥಾದ್ದು ನಮಗೆ ಗೊತ್ತಿರುವಂತಹ ಅರ್ಥ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಕೊನೆಯಲ್ಲಿ ಇರುವಂತಹ ಉತ್ತರವನ್ನು ತಾವು ಮತ್ತೆ ಓದಬೇಕಾಗುತ್ತದೆ. 'ಪ್ರಭಾವಿತ ಬಿಡ್ದುದಾರರಿಂದ ಆಸಕ್ತಿಯನ್ನು ವ್ಯಕ್ತಪಡಿಸಲು ಆಹ್ವಾನಿಸಲಾಗಿದೆ. ಆಯ್ದ ಬಿಡ್ದುದಾರರನ್ನು ಯೋಜನೆಯ ತಾಂತ್ರಿಕ-ಆರ್ಥಿಕ ಬಾಧ್ಯತೆಯಲ್ಲಿ ಸಲ್ಲಿಸಲು ಕೋರಲಾಗಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಅದರ ಅರ್ಥ ಏನು?

ಶ್ರೀ ಆಲಂಗೂರು ಶ್ರೀನಿವಾಸ್ : ಈಗಾಗಲೆ ಹಿಂದೆ.....

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಹಿಂದೆ ಇರಲಿಲ್ಲ ಸರ್ಕಾರದಲ್ಲಿ. ನಾನು ಹೇಳುತ್ತಿರುವುದು 1999ರಿಂದ 2004ರಲ್ಲಿ ತಾವು ಐದು ಜಿಲ್ಲೆಗಳ ಬಗ್ಗೆ ಮಾಡಿದಿರಲ್ಲಾ, ಮಾಲೂರು, ಜೇವರ್ಗಿ, ಬಾಗಲಕೋಟೆ ಬೇರೆ ಭಾಗಗಳಲ್ಲಿ ಮಾಡಿದ್ದೀರಿ. ಈ ಭಾಗದಲ್ಲಿ ನಿಜವಾಗಿ ಇರಲಿಲ್ಲ. ಈಗ ಮತ್ತೆ ಮಾಡಬೇಕು ಎಂದು ಉದ್ದೇಶ ಇಟ್ಟುಕೊಂಡು ಬಿಡ್ಡನ್ನು ಈಗಾಗಲೇ ಕೆಲವು ಜಿಲ್ಲೆಗಳಿಂದ ನಾವು ಕರೆದಿದ್ದೇವೆ. ಮತ್ತೆ ಈಗ ಮಾಡಬೇಕು ಎನ್ನುವ ಉದ್ದೇಶ ಇಟ್ಟುಕೊಂಡು ಈ ಬೆಡ್ಡನ್ನು ಈಗಾಗಲೇ ಕೆಲವು ಜಿಲ್ಲೆಗಳಿಂದ ಕರೆದಿದ್ದೇವೆ. ಅದು ವಿಶೇಷವಾಗಿ ಹಾಸನ, ಶಿವಮೊಗ್ಗ, ಬಿಜಾಪುರ ಕನಕಪುರ, ರಾಮನಗರ, ಹುಮ್ನಾಬಾದ್ ಇಲ್ಲಿಂದ ಕರೆದಿದ್ದೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಕಟ್ಟಾರವರೇ, ಇಲ್ಲವೆಂದು ಹೇಳಬೇಡಿ. ಮೊದಲು ಬಿಜಾಪುರ ಇದ್ದದ್ದು. ದುರ್ದೈವ ಏನು ಎಂದು ಹೇಳುತ್ತೇನೆ ಕೇಳಿ. ಎಸ್.ಎಂ. ಕೃಷ್ಣ ರವರು ಮುಖ್ಯಮಂತ್ರಿ ಇದ್ದರು.....

ಅಧ್ಯಕ್ಷರು : ಆಯಿತು, ಹಳೆ ಕತೆ ಎತ್ತಿಕೊಳ್ಳಬೇಡಿ, ಈಗ ಕೇಳಿ. ಏನೆಂದರೆ ಒಂದು ಪ್ರಶ್ನೆಗೆ ಎಷ್ಟು ಸಮಯ ನಾನು ಕೊಡಬೇಕು?

ಶ್ರೀ ಶಿವಾನಂದ ಎಸ್. ಪಾಟೀಲ್ : ಪ್ರಶ್ನೆ ನನ್ನದು ಅಲ್ಲ ಸಾರ್.

ಅಧ್ಯಕ್ಷರು : ಒಳ್ಳೆಯ ತಮಾಷೆಯಾಯಿತಲ್ಲಾ, ನಿಮಗೆ ಹೋಗುತ್ತದೆ ಸಮಯ ನಾನು ಒಂದು ಗಂಟೆ ಒಳಗೆ ಮುಗಿಸಬೇಕಾಗುತ್ತದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮುಗಿಸಿ ಸಾರ್.

ಅಧ್ಯಕ್ಷರು : ನೀವು ಏನೇನೋ ಕೇಳುತ್ತಾ ಕುಳಿತುಕೊಂಡರೆ ಏನು ಮಾಡುವುದು?

ಶ್ರೀ ಶಿವಾನಂದ ಎಸ್. ಪಾಟೀಲ್ : ಅವರಿಗೆ ಉತ್ತರ ಕೊಡುವುದಕ್ಕೆ ಬರುವುದಿಲ್ಲವೆಂದರೆ ನಾವು ಯಾರಿಗೆ ಕೇಳಬೇಕು? ನಿಮಗೆ ಕೇಳುವುದಕ್ಕಾಗುತ್ತದಾ?

ಅಧ್ಯಕ್ಷರು : ಇಲ್ಲ, ಮಾನ್ಯ ಸಚಿವರು ಈಗ ಬಿಜಾಪುರದಲ್ಲಿ ಫುಡ್ ಪಾರ್ಕ್ ಮಾಡುತ್ತೀರಾ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಈಗ ಟೆಂಡರ್ ಆಹ್ವಾನ ಮಾಡಿದ್ದೇವೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಆಯಿತು.

ದೊಡ್ಡ ಬಳ್ಳಾಪುರ ಉಪ ವಿಭಾಗದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಭೂ ನೋಂದಣಿ.

200 (1063) ಶ್ರೀ ನರಸಿಂಹಸ್ವಾಮಿ. ಜೆ. (ದೊಡ್ಡಬಳ್ಳಾಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ಉಪ ವಿಭಾಗದಲ್ಲಿ 2004–05 ಮತ್ತು 2005–06ರ ಸಾಲಿನಲ್ಲಿ ನಡೆದಿರುವ ಭೂ ನೋಂದಣಿಗಳು ಎಷ್ಟು;

ಆ) ಇವುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಇತರೆ ವರ್ಗದವರ ಜಮೀನುಗಳನ್ನು ಸರ್ಕಾರದಿಂದ ಮಂಜೂರಾತಿ ಪಡೆದು ಮಾರಾಟ ಮಾಡಿರುವ ಜಮೀನುಗಳ ವಿಸ್ತೀರ್ಣ ಮತ್ತು ಸರ್ವೆ ನಂಬರುಗಳ ವಿವರಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಭೂ ನೋಂದಣಿಗಳ ಸಂಖ್ಯೆ

2004–05 ... 19,843

2005–06 ... 21,453

ಆ) ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ಉಪವಿಭಾಗದ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ 4 ತಾಲ್ಲೂಕುಗಳಲ್ಲಿ 2004–05 ಮತ್ತು 2005–06ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಮತ್ತು ಇತರೆ ವರ್ಗದವರಿಗೆ ಮಂಜೂರಾಗಿದ್ದಂತಹ ಜಮೀನುಗಳನ್ನು ಮಾರಾಟ ಮಾಡಲು ಅನುಮತಿ ನೀಡಿದ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ.

ತಾಲ್ಲೂಕು ಹೆಸರು	2004–05			2005–06		
	ಪ.ಜಾ /ಪ.ಪಂ ಎ.ಗು.	ಇತರೆ ಎ.ಗು.	ಒಟ್ಟು ಎ.ಗು.	ಪ.ಜಾ /ಪ.ಪಂ ಎ.ಗು.	ಇತರೆ ಎ.ಗು	ಒಟ್ಟು ಎ.ಗು.
ದೊಡ್ಡಬಳ್ಳಾಪುರ	22–02	23–24	45–26	59–13	32–23	91–36
ಹೊಸಪೇಟೆ	6–22	10–02	16–24	22–00	10–33	32–33
ದೇವನಹಳ್ಳಿ	48–19	26–31	75–10	86–28	95–00	181–28
ನೆಲಮಂಗಲ	–	–	–	23–37	9–03	33–00
ಒಟ್ಟು	77–03	60–00	137–20	191–38	147–19	339–17